ನೆಮ್ಮದಿಯಿರುವ ಮಕ್ಕಳು ಚೆನ್ನಾಗಿ ಕಲಿಯುತ್ತಾರೆ

ಲಲಿತಾ ಯದುವಂಶಿ

ವಿಶ್ವಾಸವನ್ನು ಅವಲಂಬಿಸಿದ ಅನುಭವವೊಂದು ಹಲವು ಸಂಬಂಧಗಳನ್ನು ಗಟ್ಟಿಗೊಳಿಸಿತಲ್ಲದೆ, ಮಕ್ಕಳು ತಮ್ಮ ವರ್ತನೆಗಳನ್ನು ಬದಲಿಸಿಕೊಳ್ಳಬೇಕೆನ್ನುವ ನಮ್ಮ ನಿರೀಕ್ಷೆಗಳನ್ನು ಕುರಿತು ಚಿಂತನೆಯಲ್ಲಿ ತೊಡಗಲು ಅವಕಾಶ ಕಲ್ಪಿಸಿಕೊಟ್ಟಿತು. ಇದರಿಂದ ಶಾಲೆ ಎಂಬುದು ಹೇಗೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಬ್ಬರನ್ನೂ ಬೆಂಬಲಿಸುವ ಕಲಿಕಾ- ವಾತಾವರಣವನ್ನು ನಮಗೆ ದೊರಕಿಸಿಕೊಡುತ್ತದೆ ಎಂಬುದನ್ನು ಅರಿಯು-ವಂತಾಯಿತು. ಶಾಲಾ-ವಾತಾವರಣದಲ್ಲಿ ಸುರಕ್ಷಿತ ಭಾವವನ್ನು ಅನುಭವಿಸುತ್ತಿರುವಂತೆಯೇ ಪ್ರತಿನಿತ್ಯವೂ ಬೆಳೆಯಲು, ಉತ್ತಮತರ ಜೀವನ ಮೌಲ್ಯಗಳನ್ನು ಹೀರಿಕೊಳ್ಳಲು ಅವಕಾಶಗಳು ಎದುರಾಗುತ್ತಲೇ ಇರುತ್ತವೆ. ಇವು ಚಿಂತನೆಗೆ ಪೂರಕವಾದ ಬುನಾದಿಯನ್ನು ಕಲ್ಪಿಸಿಕೊಟ್ಟು, ಅರ್ಥಪೂರ್ಣ ಬದುಕನ್ನು ಕಟ್ಟಿಕೊಳ್ಳಲು ನೆರವಾಗುತ್ತವೆ. ನಾನು ಇಲ್ಲಿ ಎರಡನೇ ತರಗತಿಯ ವಿದ್ಯಾರ್ಥಿಯೊಂದಿಗಿನ ನನ್ನ ಅನುಭವವನ್ನು ಹಂಚಿಕೊಳ್ಳಲು ಬಯಸುತ್ತೇನೆ. ಕೋವಿಡ್ ಮಹಾಮಾರಿಯ ಅಲೆಗಳು ತಗ್ಗಿದ ಬಳಿಕ, ಅಂದರೆ, ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿಂದ, ಅವಳು ಶಾಲೆಗೆ ಬರಲು ಕಲಿಯುತ್ತಿರುವಲ್ಲಿಂದ ನಮ್ಮ ಕಥೆ ಮೊದಲಾಗುತ್ತದೆ. ಅವಳು ಶೈಕ್ಷಣಿಕ ವರ್ಷದ ಬಹುತೇಕ ಅವಧಿ ಶಾಲೆಗೆ ಗೈರುಹಾಜರಾಗಿದ್ದುದು ಶಿಕ್ಷಕರಾದ ನಮ್ಮೆಲ್ಲರಿಗೂ ಆತಂಕದ ಸಂಗತಿಯಾಗಿತ್ತು. ಏಕೆಂದರೆ, ಶಾಲೆಗೆ ಬರದೆ, ಕ್ರಮಬದ್ಧ ಕಲಿಕೆ ನಡೆಯದೆ, ಅವಳು ಹಿಂದೆ ಉಳಿದುಬಿಡುತ್ತಾಳೆ ಎಂಬುದು ನಮ್ಮ ಆತಂಕಕ್ಕೆ ಕಾರಣವಾಗಿತ್ತು. ಅವಳ ತರಗತಿಯ ಶಿಕ್ಷಕಿ ಹಾಗೂ ಇತರ ಶಿಕ್ಷಕರು ಮೇಲಿಂದ ಮೇಲೆ ಅವಳೊಂದಿಗೆ ಮಾತನಾಡಿ, ಕ್ರಮಬದ್ಧವಾಗಿ ಶಾಲೆಗೆ ಹಾಜರಾಗುವ ಮಹತ್ವವನ್ನು ಅವಳಿಗೆ ಮನದಟ್ಟು ಮಾಡಿಕೊಡಲು ನಡೆಸಿದ ಪ್ರಯತ್ನ ವಿಫಲವಾಗಿತ್ತು. ಕಳೆದ ಶೈಕ್ಷಣಿಕ ವರ್ಷದ ಜೂನ್ ತಿಂಗಳಲ್ಲಿ ಅವಳು ಎರಡನೇ ತರಗತಿಗೆ ಪಾದಾರ್ಪಣೆ ಮಾಡಿದ್ದಳು. ನಾನು ಅವಳ ಕೈ ಹಿಡಿದು, ದಿನವೂ ತಪ್ಪದೆ ಶಾಲೆಗೆ ಬರುವ ವಾಗ್ದಾನವನ್ನು ಅವಳಿಂದ ಪಡೆದೆ. ಮುಖದ ಮೇಲೆ ಸದಾ ನಲಿಯುತ್ತಿದ್ದ ಮುಗ್ಧ ಮುಗುಳ್ನಗೆ ಬೀರುತ್ತಾ ಅವಳು ಇದಕ್ಕೆ ಒಪ್ಪಿದ್ದಳು. ಬಾಚದ ತಲೆಕೂದಲು, ಒಗೆಯದ ಸಮವಸ್ತ್ರ, ಶಾಲೆಗೆ ತರದ ಪಠ್ಯಸಾಮಗ್ರಿ – ಇವಳನ್ನು ಸರಿಪಡಿಸುವ ಕೆಲಸ ಎಲ್ಲಿಂದ ಆರಂಭಿಸಬೇಕು ಎಂಬುದು ನನಗೆ ತಿಳಿಯದಾಗಿತ್ತು. ಒಳ್ಳೆಯ ಅಭ್ಯಾಸಗಳನ್ನು ರೂಡಿಸಿಕೊಳ್ಳದೆ, ಶಾಲೆಯ ಅಧ್ಯಯನದ ಗತಿಗೆ ತಕ್ಕಂತೆ ಹೆಜ್ಜೆಹಾಕದಿದ್ದರೆ ಅವಳಿಗೆಷ್ಟು ನಷ್ಟವಾಗುತ್ತದೆ ಎಂದು ಅವಳಿಗೆ ತಿಳಿಹೇಳುವುದು ಹೇಗೆ ಎಂಬುದೇ ನನಗೆ ತಿಳಿಯದಾಗಿತ್ತು. ನಾನು ಅವಳ ತಂದೆಯೊಂದಿಗೆ ಸಹ ಮಾತನಾಡಿ ನೋಡಿದೆ. ಶಾಲಾ ಪ್ರಾರ್ಥನಾ ಸಭೆಯಲ್ಲಿ ಕಥೆಹೇಳುವ ಚಟುವಟಿಕೆಯನ್ನು ವಿನೂತನವಾಗಿ ಈ ವರ್ಷದಿಂದ ನಡೆಸಲಾಗುತ್ತಿತ್ತು. ಬೊಂಬೆಗಳ ಸಹಾಯ ಪಡೆದು ಕಥೆಗಳನ್ನು ಹೇಳಲಾಗುತ್ತಿತ್ತು. ತರಗತಿಯಲ್ಲಿ ಮಕ್ಕಳಿಗೆ "ಗೊಂಬೆಮೂಲೆ"ಯೊಂದನ್ನು (puppet corner) ಸಹ ಕಲ್ಪಿಸಿಕೊಡಲಾಗಿತ್ತು. ಗೊಂಬೆ ಆಟ ಆರಂಭಗೊಂಡ ತರುವಾಯ ಅವಳು ಶಾಲೆಗೆ ಹೆಚ್ಚು-ಹೆಚ್ಚಾಗಿ ಹಾಜರಾಗುತ್ತಿರು-ವುದನ್ನು ನಾನು ಗಮನಿಸಿದೆ. ಕೆಲವೊಮ್ಮೆ ಅವಳು ಹಕ್ಕಿಗಳೊಡನೆ ಆಡುತ್ತಿದ್ದರೆ, ಮತ್ತೆ ಕೆಲವೊಮ್ಮೆ ತರಗತಿಯಲ್ಲಿ ವಸ್ತುಗಳನ್ನು ಒಪ್ಪಮಾಡುವುದರಲ್ಲಿ ತೊಡಗಿರುವುದನ್ನು ಕಾಣಬಹುದಿತ್ತು. ಕೆಲವೊಮ್ಮೆ, ಗೊಂಬೆಗಳನ್ನು ಸರಿಯಾಗಿ ನೋಡಿಕೊಳ್ಳದ ಇತರ ವಿದ್ಯಾರ್ಥಿಗಳ ಬಗ್ಗೆ ಅವಳು ದೂರುತ್ತಿದ್ದಳು. ಅನತಿ ಕಾಲದಲ್ಲಿ ಅವಳು ಪ್ರತಿದಿನವೂ ಶಾಲೆಗೆ ಬರುವುದನ್ನು ರೂಢಿಸಿಕೊಂಡಳು. ಈಗ, ಓದಿ-ಬರೆದು ಮಾಡುವಂತೆ ಅವಳ ಮನವೊಲಿಸುವು-ದಾದರೂ ಹೇಗೆ ಎಂಬ ಪ್ರಶ್ನೆ ನಮ್ಮಲ್ಲಿ ಮೂಡಿತು. ನಮ್ಮಲ್ಲಿ ಇದಕ್ಕೆ ಯಾವುದೇ ಸಿದ್ಧವಾದ ಉತ್ತರಗಳಿರಲಿಲ್ಲ. ಆದರೆ ಏನನ್ನಾದರೂ ಮಾಡಿ ತೀರಬೇಕಿತ್ತು. ಮಕ್ಕಳನ್ನು ಪ್ರೇರೇಪಿಸಿಲು, ಓದುವುದು ಮತ್ತು ಬರೆಯುವುದರ ಜೊತೆಗೆ, ನಾವು ಅನೌಪಚಾರಿಕ ಸಂವಹನಕ್ಕಾಗಿ ಎರಡು ತಂಡಗಳನ್ನು ರಚಿಸಿಕೊಂಡೆವು. ಇದರಿಂದ ನಾವು ಅವರನ್ನು ಚೆನ್ನಾಗಿ ಅರಿಯುವಂತಾಗಿ, ಕಾಲ ಕಳೆದಂತೆ, ಅವರ ಕಲಿಕೆಯ ಪ್ರಯತ್ನದಲ್ಲಿ ಗುಣಾತ್ಮಕ ಬದಲಾವಣೆಗಳನ್ನು ನೋಡುವುದು ಸಾಧ್ಯವಾಗುತ್ತದೆ ಎಂದು ಬಗೆದೆವು. ಆ ಸಮಯದಲ್ಲಿ ಅವಳು ಸರಳ ಕಥೆ ಹಾಗೂ ಪದ್ಯವೊಂದನ್ನು ಓದಲು ಕಲಿತಳು. ದಿನನಿತ್ಯವೂ ಮನೆಗೆಲಸ ಮಾಡಿಕೊಂಡು ಬರುವುದನ್ನು ರೂಢಿಸಿಕೊಂಡಳು. ಮನೆಗೆಲಸಕ್ಕಾಗಿ ನಾವು ಕೊಡುವ ಅಭ್ಯಾಸಗಳನ್ನು ಇಷ್ಟಪಡತೊಡಗಿದಳು. ಅತಿ ಮಹತ್ತ್ವದ ವಿಷಯವೆಂದರೆ, ನಮ್ಮಿಬ್ಬರ ಮುಂದುವರಿದ ಒಡನಾಟದಿಂದ ನಮ್ಮ ನಡುವೆ ಆತ್ಮೀಯ ಸಂಬಂಧವೊಂದು ಮೊಳೆಯಿತು.

ಕೊಂಚ ಕಾಲದ ಬಳಿಕ ಅವಳು ಉಳಿದೆಲ್ಲಾ ಮಕ್ಕಳೊಡನೆ ಕಲಿಯಲು ತೊಡಗಿದಳು. ಮೊದಲಿಗೆ ಅವಳ ಓದುವಿಕೆ ನಿಧಾನಗತಿಯಲ್ಲಿ ಸಾಗಿತ್ತು. ಮುಂದೊಂದು ದಿನ, ಸ್ಮೈಲಿ ಹೂವಿನ ಪ್ರಸಂಗವೊಂದು ಮಕ್ಕಳ ನಡುವೆ ಗಡಿಬಿಡಿಗೆ ಕಾರಣವಾಯಿತು. ಸರ್ವಾಂಗೀಣ ಅಭಿವೃದ್ಧಿಗಾಗಿ 'ಉತ್ತಮ ಪ್ರಯತ್ನ'ದಲ್ಲಿ ತೊಡಗುವ ಮಕ್ಕಳಿಗೆ ಸ್ಮೈಲಿ ಹೂವಿನ ಚಿತ್ರವನ್ನು ನೀಡಲಾಗುತ್ತಿತ್ತು. ಅವರ 'ಉತ್ತಮ ಪ್ರಯತ್ನ'ಗಳನ್ನು ಒಂದೆರಡು ವಾಕ್ಯಗಳಲ್ಲಿ ಬಣ್ಣಿಸಿ, ಸ್ಮೈಲಿ ಹೂವಿನ ಚಿತ್ರವನ್ನು ಅವರಿಗೆ ಇಡೀ ತರಗತಿಯ ಎದುರು ನೀಡಲಾಗುತ್ತಿತ್ತು. "ನನಗೂ ಹೂ ಸಿಗುತ್ತದೆಯೆ?" ಎಂದೊಮ್ಮೆ ಅವಳು ನನ್ನನ್ನು ಕೇಳಿದಾಗ, "ಹೌದು, ಯಾರು ಬೇಕಾದರೂ ಪಡೆಯಬಹುದು. ಒಂದಲ್ಲ

ಒಂದು ವಿಷಯದಲ್ಲಿ ಪ್ರತಿಯೊಬ್ಬರೂ ಉತ್ತಮ ಸಾಧನೆ ಮಾಡಬಹುದು. ನೀನು ಸಹ ಮಾಡಬಹುದು" ಎಂದೆ. ಅಂದಿನಿಂದ ಅವಳ ಪ್ರಯತ್ನದಲ್ಲಿ ಸುಧಾರಣೆ ಕಂಡುಬಂದಿತು. ಇಷ್ಟೆಲ್ಲ ಆಗುತ್ತಿರುವಂತೆಯೇ ಮತ್ತೊಂದು ಪ್ರಸಂಗ ನಡೆಯಿತು. ಇದುವರೆಗೂ ಅವಳು ತಲೆಬಾಚಿಕೊಂಡು ಬಂದದ್ದು ವಿರಳವೆನ್ನಬಹುದಿತ್ತು. ನಾನು ಅವಳಿಗೆ, "ನೀನು ಪ್ರತಿನಿತ್ಯ ಶಾಲೆಗೆ ಬರುವ ಮೊದಲು ಅಂದವಾಗಿ ತಲೆಬಾಚಿಕೊಂಡು ಬರಬೇಕು" ಎಂದೆ. ಅದಕ್ಕವಳು, "ನನ್ನ ಅಮ್ಮ ತಲೆಬಾಚುವುದಿಲ್ಲ" ಎಂದಳು. "ಸರಿ, ನಾನು ಅಮ್ಮನೊಂದಿಗೆ ಮಾತನಾಡುತ್ತೇನೆ" ಎಂದು ಹೇಳಿದೆ. ಅಂದು ನಾನು ಹಿರಿಯ ವಿದ್ಯಾರ್ಥಿನಿ-ಯೊಬ್ಬಳಿಂದ ಬಾಚಣಿಗೆಯನ್ನು ಕೇಳಿ ಪಡೆದು, ಅವಳ ತಲೆಯನ್ನು ಬಾಚಿ, ಪೋನಿ ಟೇಲ್ ಕೇಶವಿನ್ಯಾಸ ಮಾಡಿದೆ. "ಮನೆಗೆ ಹೋಗಿ ನಿನ್ನ ಅಮ್ಮನಿಗೆ ಇದನ್ನು ತೋರಿಸಿ, ದಿನವೂ ಇದೇ ರೀತಿ ತಲೆಬಾಚಿ ಕಳಿಸುವಂತೆ ಹೇಳು" ಎಂದು ನಾನು ಅವಳಿಗೆ ತಿಳಿಸಿದೆ. ಅಂದಿನ ದಿನ ಶಾಲೆಯಲ್ಲಿ ಅವಳು ತನ್ನ ಪೋನಿ ಟೇಲ್‌ಅನ್ನು ತಿರುಗಿಸುತ್ತ, ಕನ್ನಡಿಯಲ್ಲಿ ಪದೇಪದೇ ಮುಖ ನೋಡಿಕೊಳ್ಳುತ್ತಾ ಕಳೆದಳು. ಅವಳ ತಲೆಯಲ್ಲಿ ಏನು ಯೋಚಿಸುತ್ತಿದ್ದಳೋ ನನಗೆ ತಿಳಿಯದು, ಆದರೆ, ಅವಳ ಮುಖದ ಮೇಲೆ ಮುಗುಳ್ನಗೆ ಆಡುತ್ತಿದ್ದುದಂತೂ ನಿಜ. ಮರುದಿನ ಶಾಲೆಗೆ ಬಂದಾಗ ಅವಳು ಬದಲಾದ ವ್ಯಕ್ತಿಯಾಗಿದ್ದಳು! ಮುನ್ನಡೆಯುವ ಹಾಗೂ ನಲಿವಿನಿಂದ ಕಲಿಯುವ ಭರವಸೆಯೊಂದನ್ನು ಅವಳು ತನ್ನೊಂದಿಗೆ ಹೊತ್ತುತಂದಂತೆ ತೋರಿತು. ಈಗ ಪ್ರತಿದಿನ ಊಟದ ಬಳಿಕ ನಾನಿರುವಲ್ಲಿಗೆ ಬಂದು ಹಲವು ವಿಚಾರಗಳನ್ನು ನನ್ನೊಂದಿಗೆ ಹರಟುತ್ತಾಳೆ, ಓದುತ್ತಾಳೆ ಹಾಗೂ ಒಂದೆರಡು ಕಥೆಗಳನ್ನು ಹೇಳುತ್ತಾಳೆ ಕೂಡ. ಅವಳು ತನ್ನ ಕಲಿಕೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದಾಳೆ. ಬಿಡುವಿನ ಸಮಯದಲ್ಲಿ ಅವಳು ಇಂಗ್ಲಿಷ್ ಕೋಣೆಗೆ ಹೋಗಿ ಅಲ್ಲಿ ಏನನ್ನಾದರೂ ಓದಲು ಪ್ರಯತ್ನಿಸುತ್ತಿರುತ್ತಾಳೆ. ಉಳಿದ ಮಕ್ಕಳು ಅವಳ ಬಗ್ಗೆ ಆಡಿಕೊಳ್ಳುವುದನ್ನು ಕೈಬಿಟ್ಟಿದ್ದಾರೆ; ಅವರೆಲ್ಲ ತಂಡದಲ್ಲಿ ಕಾರ್ಯನಿರತರಾದಾಗ ಮನಃಪೂರ್ವಕವಾಗಿ ಒಬ್ಬರಿಗೊಬ್ಬರು ಭಾವನಾತ್ಮಕ ಬೆಂಬಲವೀಯುತ್ತಾರೆ. ನನ್ನ ಪಾಲಿಗೆ ಇದೊಂದು ಅನುಭವ ಮಾತ್ರವೇ ಆಗಿರಲಿಲ್ಲ; ಕಲಿಕೆಗೆ ಒಂದು ಅವಕಾಶವಾಗಿ ಮಾರ್ಪಟ್ಟಿತ್ತು. ಶಾಲಾ-ವಾತಾವರಣದಲ್ಲಿ ಯೋಗಕ್ಷೇಮದ ಮುಖಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಾಗ ಉತ್ತಮ ಸ್ವಾಸ್ಥ್ಯ ಮತ್ತು ಸಂತಸಗಳ ಅನುಭವ ಮಹತ್ವದ್ದಾಗುತ್ತದೆ. ಸ್ವಾಸ್ಥ್ಯವೆಂಬುದು ಮಾನಸಿಕ ಹಾಗೂ ಭೌತಿಕ ಆರೋಗ್ಯ, ಭೌತಿಕ ಹಾಗೂ ಭಾವನಾತ್ಮಕ ಸುರಕ್ಷೆ ಮತ್ತು ತಾನು ಶಾಲೆಯ ಅಂಗ ಎಂಬ ಭಾವನೆ, ಉದ್ದೇಶಪೂರ್ಣತೆ, ಸಾಧನೆ ಹಾಗೂ ಸಾಫಲ್ಯದ ಸಂವೇದನೆಯನ್ನು ಒಳಗೊಂಡಿರುತ್ತದೆ. ಇದರಿಂದ ನಾವು ಮುಂದೆ ಸಾಗಲು ಪ್ರೇರಣೆ ದೊರಕಿ, ಪರಸ್ಪರ ಸಂಬಂಧಗಳನ್ನು ಬೆಸೆಯುವಲ್ಲಿ ನೆರವಾಗುತ್ತದೆ. ಇದರಿಂದ ಕೆಲಸದಲ್ಲಿ ಹಿತಕರವಾದ ವಾತಾವರಣ ಏರ್ಪಡುತ್ತದೆ. ಈ ಕಾರಣಕ್ಕಾಗಿ, ಪ್ರಧಾನ ವಿಷಯಗಳನ್ನು ಕುರಿತಂತೆ ಶಾಲಾ ತಂಡದೊಂದಿಗೆ ನಡೆಸುವ ಔಪಚಾರಿಕ ಹಾಗೂ ಅನೌಪಚಾರಿಕ ಸಂವಹನ ಅತಿ ಮುಖ್ಯವಾಗುತ್ತದೆ. ಶಾಲೆಯ ಒಳಗೆ ಮತ್ತು ಹೊರಗೆ ಮಕ್ಕಳು ಪ್ರಜಾಸತ್ತಾತ್ಮಕ ಸಂಸ್ಕೃತಿಯೊಂದರಲ್ಲಿ ತಮ್ಮ ಸಾಮರ್ಥ್ಯಗಳನ್ನು ಬಳಸಲು ಇರುವ ಯೋಗ್ಯತೆಯನ್ನು ಅವರ ಯಶಸ್ಸು ಅವಲಂಬಿಸಿರುತ್ತದೆ. ಹೀಗಾಗಿ, ಶೈಕ್ಷಣಿಕ ಸಾಧನೆ, ವರ್ತನೆ ಹಾಗೂ ಶಾಲಾ- ವಾತಾವರಣದಲ್ಲಿ ಮಕ್ಕಳ ಸಾಮಾಜಿಕ ಹೊಂದಾಣಿಕೆಗಳಲ್ಲಿ ಸುಧಾರಣೆ ತರುವ ಪ್ರಯತ್ನಗಳು ನಡೆಯಬೇಕು. ಜೊತೆಗೆ, ಶಿಕ್ಷಕರು ಮತ್ತು ಶಾಲಾ ಸಿಬ್ಬಂದಿ ಇವನ್ನೂ ಸಹ ಮಾಡಬೇಕಿದೆ:

- ಮಕ್ಕಳೊಡನೆ ಮಾತುಕತೆ ನಡೆಸುವುದು
- ಪರಿಕಲ್ಪನೆಗಳನ್ನು ಬೋಧಿಸುವ ಪರಿಣಾಮಕಾರಿ ಹಾಗೂ ಹೊಸತನ ತರುವ ವಿಧಾನಗಳ ಬಗ್ಗೆ ಅರಿತಿರುವುದು
- ವಿದ್ಯಾರ್ಥಿಗಳು ಸವಾಲುಗಳನ್ನು ಎದುರಿಸಲು ಹಾಗೂ ಬೇಸರವನ್ನು ನೀಗಲು ಅಗತ್ಯವಿರುವ ಅವರ ಮಾನಸಿಕ ಹಾಗೂ ಭೌತಿಕ ಸಾಮರ್ಥ್ಯಗಳ ಸುಧಾರಣೆಯಲ್ಲಿ ನೆರವಾಗುವುದು
- ವಿದ್ಯಾರ್ಥಿಗಳಿಗೆ ಭಾವನಾತ್ಮಕ ಬೆಂಬಲ ನೀಡುವುದು
- ಭೌತಿಕ ಸಾಮರ್ಥ್ಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳುವುದು
- ವಿದ್ಯಾರ್ಥಿಗಳು ಸಂವಹನ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ನೆರವಾಗುವುದು
- ಅರ್ಥಪೂರ್ಣವೂ, ವಿಶ್ವಾಸಾರ್ಹವೂ ಆದ ಸಂಬಂಧಗಳನ್ನು ಕಟ್ಟಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ನೆರವಾಗುವುದು
- ಶಾಲಾ ಪ್ರಕ್ರಿಯೆಗಳಲ್ಲಿ ಕೊಂಚ ನಮ್ಯತೆಯನ್ನು ತರುವುದು
- ಜೊತೆಗೂಡಿ ಮಾಡುವ ಕೆಲಸಕ್ಕೆ ಅವಕಾಶಗಳನ್ನು ಕಲ್ಪಿಸಿಕೊಡುವುದು

ಶಿಕ್ಷಕರು ಪ್ರೇರೇಪಿತರು, ಕೌಶಲಪೂರ್ಣರು, ಗಾಢ ಅನುರಕ್ತಿಯುಳ್ಳವರು, ಪ್ರಾಮಾಣಿಕರು ಹಾಗೂ ತಮ್ಮ ಕೆಲಸದ ವಿಷಯದಲ್ಲಿ ಚಿಂತನಶೀಲರೂ ಆಗಿರುವುದು ಬಹು ಮುಖ್ಯ ಎಂದು, ಓರ್ವ ಶಿಕ್ಷಕಳಾಗಿ ನಾನು ಭಾವಿಸುತ್ತೇನೆ. ನಮ್ಮ ಕೆಲಸದ ಸ್ಥಳಕ್ಕೆ ಅರ್ಥ ತಂದುಕೊಡುವಲ್ಲಿ ಶಾಲೆಯ ಆರೋಗ್ಯಪೂರ್ಣ ಸಂಸ್ಕೃತಿಯು ಮಹತ್ವದ ಪಾತ್ರ ವಹಿಸುತ್ತದೆ. ಅದರಿಂದ ಎಲ್ಲರ ಶಕ್ತಿ ಹಾಗೂ ಪರಿಣಾಮಕತ್ವಗಳು ಬೆಳೆಯಲು ಸಹಾಯ-ವಾಗುತ್ತದೆ. ಮಕ್ಕಳ ಯೋಗಕ್ಷೇಮ ಮತ್ತು ಶೈಕ್ಷಣಿಕ ಸಾಧನೆಗಳ ನಡುವೆ ನೇರ ಸಂಬಂಧವೊಂದಿದೆ. ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಅವರ ಸಾಧನೆಗೆ ಒಂದು ಮುಖ್ಯ ನಿಯಮವಾಗಿರುವಂತೆಯೇ, ಸಾಧನೆಯೂ ಯೋಗಕ್ಷೇಮಕ್ಕೆ ಆವಶ್ಯಕವಾಗುತ್ತದೆ.

ಶಾಲಾ ವಾತಾವರಣವನ್ನು ಪೋಷಿಸಲು ಕೆಲವು ನಿರ್ದಿಷ್ಟ ಕಾರ್ಯವಿಧಾನಗಳನ್ನು ಕೆಳಗೆ ನೀಡಲಾಗಿದೆ; ಇವನ್ನು ನಮ್ಮ ಶಾಲೆಯಲ್ಲಿ ಸ್ಥಾಪಿಸಲು ಎಲ್ಲ ಶಿಕ್ಷಕರು ಹಾಗೂ ಶಾಲಾ ನಿರ್ವಾಹಕರು ಒಟ್ಟಾಗಿ ಶ್ರಮಿಸುತ್ತಿದ್ದೇವೆ. ಅವರು ಕಟ್ಟಿಕೊಳ್ಳುವ ಗಟ್ಟಿಯಾದ ಸಹಾಯಕ ಸಂಬಂಧಗಳು ಮಕ್ಕಳು ತಮ್ಮ ಭೌತಿಕ

ಆರಾಮದ ವಲಯಗಳಿಂದ ದೂರಸರಿದು, ಶೈಕ್ಷಣಿಕ ಸಾಧನೆಗೆ ಮೂಲಭೂತವಾದ ಹೊಸ ವಿಚಾರಗಳನ್ನು, ಚಿಂತನೆಯ ಹೊಸ ವಿಧಾನಗಳನ್ನು ಅನ್ವೇಷಿಸಲು ಬೇಕಿರುವ ಭಾವನಾತ್ಮಕ ಸಂಪನ್ಮೂಲಗಳನ್ನು ಪೂರೈಸುತ್ತವೆ.

ಅಂತಹ ಪೋಷಕ ವಾತಾವರಣದ ನಿರ್ಮಾಣಕ್ಕಾಗಿ ನಮ್ಮ ಪ್ರಯತ್ನಗಳಲ್ಲಿ ಕೆಲವೆಂದರೆ:

ಮಕ್ಕಳು ಪ್ರಸ್ತುತಪಡಿಸಲಿರುವುದನ್ನು ಕೇಳಲು ಎಲ್ಲರೂ ಒಂದೆಡೆ ಕಲೆಯುವ ಮೂಲಕ ದಿನದ ಶುಭಾರಂಭ. ಜೊತೆಗೆ, ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಗೌರವಪೂರ್ಣ ಅವಕಾಶ ದೊರೆತ ಭಾವನೆಯಲ್ಲಿ ನಡೆದುಕೊಳ್ಳುತ್ತಾರೆ.

ನಮ್ಮ ಮತ್ತು ಮಕ್ಕಳ ನಡುವಿನ ಹಾಗೂ ಪರಸ್ಪರ ಸಂಬಂಧವು ಗಟ್ಟಿಗೊಳ್ಳುವುದಕ್ಕಾಗಿ ಶಾಲಾ ಸಮಯವನ್ನು ವಿನಿಯೋಗಿ-ಸಲಾಗುತ್ತಿದೆ – ಅದು ತರಗತಿಯಲ್ಲಿ, ಆಟದ ಮೈದಾನದಲ್ಲಿ, ಗ್ರಂಥಾಲಯದಲ್ಲಿ ಅಥವಾ ಮಧ್ಯಾಹ್ನದ ಬಿಸಿಯೂಟದ ವೇಳೆಯಲ್ಲಿ ಹಾಗೂ ಸಮುದಾಯ ಭೇಟಿ, ಇತ್ಯಾದಿ ಯಾವುದೇ ಸಮಯದಲ್ಲಾದರೂ ಆಗಿರಬಹುದು. ಶಿಕ್ಷಕರು ಮತ್ತು ಮಕ್ಕಳ ನಡುವಿನ ಅನೌಪಚಾರಿಕ ಮಾತುಕಥೆಯ ಸಮಯವೆಂದರೆ ಅದು ಎಲ್ಲರಿಗೂ ವಿರಮಿಸಲು, ತಿನ್ನಲು ಹಾಗೂ ಗೆಳೆಯ / ಗೆಳತಿಯರೊಂದಿಗೆ ಹರಟಲು, ಕಲೆತು ಅಧ್ಯಯನ ನಿರತರಾಗಲು, ಪರಸ್ಪರ ನೆರವಾಗಲು, ಕೌಟುಂಬಿಕ ಸನ್ನಿವೇಶಗಳ ಬಗ್ಗೆ ತಿಳಿಯಲು, ಇವೇ ಮೊದಲಾದ ಸಂಗತಿಗಳಿಗೆ ಅವಕಾಶ ಮಾಡಿಕೊಡುತ್ತದೆ.

ಮಕ್ಕಳು ತಮ್ಮ ಅಂತರಂಗವನ್ನು ಯಾರೊಡನೆಯಾದರೂ ತೆರೆದುಕೊಳ್ಳಲು ಬಯಸುತ್ತಾರೆ; ಅವರು ಶಿಕ್ಷಕರೊಬ್ಬರನ್ನು ಅದಕ್ಕಾಗಿ ಆಯ್ದುಕೊಂಡರೆ ಆ ಶಿಕ್ಷಕರು ಹಿತಚಿಂತಕರ ಪಾತ್ರವನ್ನು ವಹಿಸುವುದು ಅನಿವಾರ್ಯವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅರ್ಥಪೂರ್ಣ ಸಂವಾದದ ಅಗತ್ಯ ಕಂಡುಬರುತ್ತದೆ. ಇದನ್ನು, ತಂಡದಲ್ಲಿ ಅಥವಾ ವೈಯಕ್ತಿಕವಾಗಿ, ಸಂದರ್ಭಕ್ಕೆ ತಕ್ಕಂತೆ ಮಾಡಬೇಕಾಗುತ್ತದೆ. ಇದಕ್ಕಾಗಿ ಶಾಲೆಯಲ್ಲಿ ತಂಡವೊಂದನ್ನು ಸಹ ರಚಿಸಲಾಗಿದೆ.

ಪ್ರಾಥಮಿಕ ತರಗತಿಗಳಲ್ಲಿ ತರಗತಿಗಳ ಅವಧಿಯನ್ನು ವಿಸ್ತರಿಸಲಾಯಿತು. ಮಕ್ಕಳಿಗೆ ಕಡಿಮೆ ಅವಧಿಯ ತರಗತಿಗಳಿದ್ದಾಗ ಅವರು ಹಲವು ವಿಧಗಳ ಬೋಧನೆ ಮತ್ತು ಕಲಿಕೆಗಳನ್ನು ಅನುಭವಿಸುವ, ಪ್ರಶ್ನೆಗಳನ್ನು ಕೇಳುವ, ಕಲಿಕೆಯ ಬಗ್ಗೆ ಚಿಂತನೆ ನಡೆಸುವ ಹಾಗೂ ಮನಬಿಚ್ಚಿ ಹಂಚಿಕೊಳ್ಳುವ ಸಂಭವ ಕಡಿಮೆ ಇರುತ್ತದೆ. ಈ ಕಾರಣದಿಂದ ಶೈಕ್ಷಣಿಕವಾಗಿ ತೊಡಗಿಸಿಕೊಳ್ಳುವಿಕೆಯ ಉದ್ದೇಶಕ್ಕೆ ಧಕ್ಕೆ ಉಂಟಾಗುತ್ತದೆ. ಆದ್ದರಿಂದ, ದೀರ್ಘಾವಧಿ ತರಗತಿಗಳ ಬುನಾದಿಯ ಮೇಲೆ ಮಕ್ಕಳೊಡನೆ ಕಲಿಯುವ ಹಲವು ವಿಧಾನಗಳನ್ನು ಪರಿಶೀಲಿಸುವ ಕಾರ್ಯ ನಡೆಯುತ್ತಿದೆ.

ಓದುವ ಸಂಸ್ಕೃತಿಯನ್ನು ಹುಟ್ಟುಹಾಕುವ ಪ್ರಯತ್ನಗಳು ಚಾಲನೆಯಲ್ಲಿವೆ. ಎಲ್ಲ ತರಗತಿಗಳ ಬಹುತೇಕ ಮಕ್ಕಳು ಓದಿನೊಂದಿಗೆ ಸಂಬಂಧ ಕಟ್ಟಿಕೊಳ್ಳಲು ಸಮರ್ಥರಾಗಿದ್ದಾರೆ. ಅವರ ಅಗತ್ಯಗಳಿಗೆ ಹಾಗೂ ಆಸಕ್ತಿಗಳಿಗೆ ಸಂಬಂಧಿಸಿದಂತೆ ಅವರು ಓದಿಗಾಗಿ ಪುಸ್ತಕಗಳನ್ನು ಆಯ್ದು, ವಿವಿಧ ವೇದಿಕೆಗಳಲ್ಲಿ ಅವನ್ನು ಹಂಚಿಕೊಳ್ಳುತ್ತಾರೆ. ಇದರ ಪರಿಣಾಮವೆಂದರೆ, ಅವರ ಪರಿಕಲ್ಪನಾತ್ಮಕ ಹಾಗೂ ಪ್ರಾಯೋಗಿಕ ಸಾಮರ್ಥ್ಯಗಳಿಗೆ ಪ್ರೋತ್ಸಾಹ ದೊರೆಯುವಂತಾಗಿ, ಅವರು ನೆಮ್ಮದಿ ಅನುಭವಿಸುವಂತಾಗುತ್ತದೆ. ಅವರು ದಿನಚರಿ ಬರೆಯುವ ಹವ್ಯಾಸವನ್ನೂ ರೂಢಿಸಿಕೊಂಡಿದ್ದಾರೆ.

ಸರಳವಾಗಿ ಹೇಳಬೇಕೆಂದರೆ: ನೆಮ್ಮದಿಯಿಂದ ಇರುವವರು ಉತ್ತಮವಾಗಿ ಕಲಿಯಬಲ್ಲರು.



ಚಿತ್ರ 1. ಟೋಂಕ್ ಪಟ್ಟಣದ ಅಜೀಂ ಪ್ರೇಮ್‌ಜಿ ಶಾಲೆಯ ವಿದ್ಯಾರ್ಥಿಗಳು ತರಗತಿಯ ಚಟುವಟಿಕೆಗಳಲ್ಲಿ ತೊಡಗಿರುವುದು



ಚಿತ್ರ 2. ಆಟದ ಮೈದಾನದಲ್ಲಿ ಟೋಂಕ್ ಪಟ್ಟಣದ ಅಜೀಂ ಪ್ರೇಮ್‌ಜಿ ಶಾಲೆಯ ವಿದ್ಯಾರ್ಥಿಗಳು



ಲಲಿತಾ ಯದುವಂಶಿ ಅವರು ರಾಜಸ್ಥಾನದ ಟೋಂಕ್ ಪಟ್ಟಣದ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಭಾಷಾ ಶಿಕ್ಷಕರಾಗಿದ್ದಾರೆ. ಅವರು ಶಿಕ್ಷಣ ಮತ್ತು ಹಿಂದಿ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಓದುವುದು, ಸಂಗೀತವನ್ನಾಲಿಸುವುದು, ಚಲನಚಿತ್ರಗಳನ್ನು ನೋಡುವುದು, ಹೊಸ ಜಾಗಗಳಿಗೆ ಭೇಟಿ ನೀಡುವುದು ಹಾಗೂ ಮಕ್ಕಳೊಂದಿಗೆ ಸಂಭಾಷಣೆಯಲ್ಲಿ ತೊಡಗುವುದು ಇವರ ಆಸಕ್ತಿಯ ವಿಷಯಗಳಾಗಿವೆ. ಇವರನ್ನು lalita.yaduvanshi@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಕುಶಾಲ್ ಬಿ.ಎಸ್.** | ಪರಿಶೀಲನೆ: **ನಾಗಮಣಿ ಎಸ್. ಎನ್.**